ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:32:ಪೂ.ಭೇ:2020-21:ತವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 04.07.2020

# ಸುತ್ತೋಲೆ

**ವಿಷಯ:** ಇಲಾಖಾ ವ್ಯಾಪ್ತಿಯ ಕಛೇರಿ ಮತ್ತು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಪೂರ್ವಾನುಮತಿ ಪಡೆದು ಅಧಿಕಾರಿಗಳನ್ನು ಭೇಟಿ ಮಾಡುವ ಬಗ್ಗೆ.

** ** **

ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರ /ನೌಕರರುಗಳು ವಿವಿಧ ಕಾರಣಗಳಿಂದ ತಮ್ಮ ಕೆಲಸ ಕಾರ್ಯಗಳಿಗಾಗಿ ಕೇಂದ್ರ ಕಛೇರಿಗೆ ಭೇಟಿ ನೀಡುತ್ತಿರುವುದು ಕಂಡುಬಂದಿರುತ್ತದೆ. ಇಲಾಖೆಯ ಅಧಿಕಾರಿ/ನೌಕರರುಗಳ ಸಮಸ್ಯೆಗಳನ್ನು ನೋಂದಾಯಿಸಲು ಇಲಾಖೆಯು ಈ ಕೆಳಕಂಡ ಮೈತ್ರಿ ಸಹಾಯವಾಣಿ ಸಂಖ್ಯೆ ಹಾಗೂ ಇ-ಮೇಲ್ ಐಡಿಗಳನ್ನು ಒದಗಿಸಿದೆ.

(1) 1800-425-6178

(2) 8095556178

(3) ಇ-ಮೇಲ್-dce.maithri@gmail.com

ಪ್ರಸ್ತುತ ಕೊರೋನಾ (Covid-19) ಹರಡುವಿಕೆಯ ಹಿನ್ನೆಲೆಯಲ್ಲಿ, ಇಲಾಖೆಯಡಿಯಲ್ಲಿನ ಎಲ್ಲಾ ಅಧಿಕಾರಿ/ನೌಕರರು ತಮ್ಮ ಎಲ್ಲಾ ಸಮಸ್ಯೆಗಳನ್ನು ಮೇಲೆ ನೀಡಿರುವ ಸಹಾಯವಾಣಿ/ಇ-ಮೇಲ್ ಮೂಲಕವೇ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಲೇಬೇಕಾದ ಸಂದರ್ಭದಲ್ಲಿ, ಈ ಬಗ್ಗೆ ತಮ್ಮ ಕಛೇರಿ/ಕಾಲೇಜುಗಳ ಮುಖ್ಯಸ್ಥರುಗಳಿಂದ ಅನುಮತಿ ಪತ್ರ ಮತ್ತು ರಜೆಯನ್ನು ಪಡೆದು ಈ ಕಛೇರಿಯಲ್ಲಿ ಸಂದರ್ಶಕರಿಗೆ ನಿಗದಿಪಡಿಸಲಾದ ಸಮಯ ಮಧ್ಯಾಹ್ನ 3-30 ರಿಂದ 5-30 ರವರೆಗೆ ಅಧಿಕಾರಿಗಳನ್ನು ಮಾತ್ರ ಭೇಟಿಯಾಗಲು ಸೂಚಿಸಲಾಗಿದೆ. ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದೆ.

ಆಯುಕ್ತರು
ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ, ಕಾನೂನು ಬಿ.ಎಡ್. ಮತ್ತು ಚಿತ್ರಕಲೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3) ವಿಶೇಷಾಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ-ಇಲಾಖೆಯ ವೆಬ್‌ಸೈಟ್‌ನಲ್ಲಿ ಸುತ್ತೋಲೆಯನ್ನು ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಪ್ರತಿ:-

1) ಕಾಲೇಜು ಶಿಕ್ಷಣ ಆಯುಕ್ತರು / ನಿರ್ದೇಶಕರು / ಮುಖ್ಯ ಆಡಳಿತಾಧಿಕಾರಿಗಳು/ಹೆಚ್ಚುವರಿ ನಿರ್ದೇಶಕರು/ಜಂಟಿ ನಿರ್ದೇಶಕರ ಆಪ್ತಶಾಖೆಗಳಿಗೆ
2) ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿನ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ ಮತ್ತು ಬೋಧಕೇತರ ಅಧಿಕಾರಿ ವರ್ಗದವರಿಗೆ
3) ಕಛೇರಿ ಪ್ರತಿ.